ಯಿಂದ ಅವರು ಮುಷ್ಕರ ಹೂಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡದೆ ಅವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅವರ ಮನವಿ ಏನಿದೆ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹನುಮಗೌಡ ಶಂಕರಗೌಡ.— ನವ್ಮ ಕುಷ್ಟಗಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ವಿದ್ಯುತ್ ಅನ್ನು ಸಲ್ಲಿಸುವುದರಿಂದ ಕುಡಿಯುವ ನೀರಿಗೆ ಕೂಡ ತೊಂದರೆಯಾಗಿ ಜನರು ಕಂಗಾಲಾಗಿದ್ದಾರೆ. ದಯವಿಟ್ಟು ಆ ಭಾಗದ ಪರಿಸ್ಥಿತಿಯನ್ನು ಪರಾಂಬರಿಸಿ ಸೂಕ್ತವಾದ ವ್ಯವಸ್ಥೆಯನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಬೇಕು.

ಅಧ್ಯಕ್ಷರು.— ಆ ಬಗ್ಗೆ ಮಂತ್ರಿಗಳು ಹೇಳಿಕೆ ನೀಡುವುದಾಗಿ ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ವಿದ್ಯುಚ್ಛಕ್ತಿಯ ಕೊರತೆ ಬಗ್ಗೆ ಸೂಕ್ಷ್ಮವಾಗಿ ವಿದ್ಯುಚ್ಛಕ್ತಿ ಮಂತ್ರಿಗಳು ಈಗಾಗಲೇ ಮಾನ್ಯ ಸಭೆಗೆ ತಿಳಿಸಿದ್ದಾರೆ. ಇದರ ಬಗ್ಗೆ ಪೂರ್ಣ ವಿವರಗಳನ್ನು ಒಳಗೊಂಡ ಹೇಳಿಕೆಯನ್ನು ಸಂಬಂಧಪಟ್ಟ ಮಂತ್ರಿಗಳು ಸಭೆಗೆ ತಿಳಿಸುತ್ತಾರೆ. ಯಾವ ವಿಭಾಗದಲ್ಲಿ ಯಾವ ವೃತ್ತಿಯ ಜನರೇ ಇರಲಿ ಅವರ ಕೊರತೆಯನ್ನು ನೆನಪಿನಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಅವರ ತೊಂದರೆ ಕಡಿಮೆ ಆಗುವಂತೆ ತೀವ್ರವಾದ ರೀತಿಯಲ್ಲಿ ಮತ್ತು ಬೇಗನೇ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

iii) ವಿಷಯ : ಕರ್ನಾಟಕ ಕಲಾವಿದರ ಸಂಘದವರ ಬೇಡಿಕೆ ಬಗ್ಗೆ

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಕರ್ನಾಟಕ ಕಲಾವಿದರ ಸಂಘದವರು ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಮಂತ್ರಿಗಳೂ ಕೂಡ ಕಲೆಯ ಬಗ್ಗೆ ಆಸಕ್ತಿಯುಳ್ಳವರು ಮತ್ತು ಕಲಾಗಾರರ ಬಗ್ಗೆ ಸಹಾನುಭೂತಿ ಇರುವವರು. ಅವರ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸುತ್ತಾರೆಂದು ತಿಳಿದಿದ್ದೇನೆ. ಅವರು ಇಟ್ಟಿರುವಷ್ಟಕ್ಕೆ ಬೇಡಿಕೆಗಳು ನ್ಯಾಯಯುತವಾದವು ಮತ್ತು ಸಮಂಜಸವಾದವು ಆಗಿವೆ. ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರೂ ಸಫಲತೆ ಕಂಡಿಲ್ಲ. ಆದ್ದರಿಂದ, ದಯವಿಟ್ಟು ಆ ಸಂಘದ ಪದಾಧಿಕಾರಿಗಳನ್ನು ಕರೆದು ಮಾತನಾಡಿ ಅವರಿಗೆ ಹಣ ಕೊಡತಕ್ಕ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್.— ಅವರ ಮನವಿ ಏನಿದೆ ಕೊಡಿ, ನೋಡೋಣ.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಸಚಿವರು).— ಚಿತ್ರಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ರಾಜ್ಯದಲ್ಲಿರತಕ್ಕ ಸುಮಾರು 21 ಕಲಾ ಶಾಲೆಗಳಿಗೆ ಅನುದಾನ ನೀಡುತ್ತಿದ್ದೇವೆ. ಇವತ್ತಿನ ದಿವಸ ಅವು ಕಲಾತರಗತಿಗಳನ್ನು ನಡೆಸುತ್ತಿವೆ. ಅವುಗಳಲ್ಲಿರತಕ್ಕ ಶಿಕ್ಷಕರಿಗೆ ಚೆಕ್ ಮೂಲಕ ವೇತನ ನೀಡುವ ಏರ್ಪಾಡು ಈಗ ಇರುವುದಿಲ್ಲ. ಅದನ್ನು ಪರಿಶೀಲಿಸುತ್ತಿದ್ದೇವೆ. ಪ್ರಾಥಮಿಕ ಹಂತದಲ್ಲಿ ತರಬೇತಾದ ಶಿಕ್ಷಕರನ್ನೇ ನೇಮಿಸುತ್ತಿದ್ದೇವೆ; ಆದರೆ ಪ್ರತ್ಯೇಕವಾಗಿ ಕಲಾ ಶಿಕ್ಷಕರನ್ನು ನೇಮಿಸುವುದಿಲ್ಲ. ಏಕೆಂದರೆ ಪ್ರಾಥಮಿಕ ಹಂತದಲ್ಲಿ ಎಲ್ಲ ವಿಷಯಗಳನ್ನು ಸಮನ್ವಯಗೊಳಿಸಿ ಮಕ್ಕಳಿಗೆ ಬೋಧಿಸಬೇಕಾಗುತ್ತದೆ. ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಕಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. 1982-83ನೇ ಸಾಲಿನಲ್ಲಿ ಚಿತ್ರಕಲಾ ಪರೀಕ್ಷೆಯಲ್ಲಿ ಮೊದಲನೇ ಮತ್ತು ಎರಡನೇ ಸ್ಥಾನಗಳಿಸಿದವರಿಗೆ ಬಹುಮಾನಗಳನ್ನು ಕೊಡಲಾಗಿದೆ; ಬಹುಮಾನದ ಹಣ 335 ರೂಪಾಯಿಗಳು. ಸಾಮಾನ್ಯ ವಿದ್ಯಾಭ್ಯಾಸದಲ್ಲಿ 22 ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲು 2265 ರೂಪಾಯಿ ಏರ್ಪಾಡಾಗಿದೆ. ಈ ಯೋಜನೆಯನ್ನು ಹಾಗೆಯೇ ಮುಂದುವರಿಸಲಾಗುತ್ತಿದೆ. ಕಲಾ ಶಿಕ್ಷಕರಿಗೆ ಪ್ರೋತ್ಸಾಹ ಕೊಡುವ ಮತ್ತು ಮನವಿಯಲ್ಲಿ ತಿಳಿಸಿರುವ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು.

iv) ವಿಷಯ : ನಂಜನಗೂಡು ಟೌನಿನ ಸುಜಾತ ಮಿಲ್ ಕಾರ್ಮಿಕರಾದ ಶ್ರೀ ರಾಜು ಎನ್ನುವವರಿಗೆ ಚಾಕು ಹಾಕಿರುವ ಬಗ್ಗೆ.

ಶ್ರೀ ಎಂ. ಮಹದೇವ್.— ತಾ॥ 2-2-1984 ರಂದು 3.30ರ ಸಮಯದಲ್ಲಿ ನಂಜನಗೂಡು ಟೌನಿನ ಸುಜಾತ ಮಿಲ್ ಕಾರ್ಮಿಕ (ಭಾರತೀಯ ಜನತಾ ಪಕ್ಷದ ಕಾರ್ಯಕರ್ತ) ಶ್ರೀ ರಾಜು ಎಂಬುವವರಿಗೆ 4 ಜನ ಸೇರಿಕೊಂಡು ಮುಖ್ಯ ರಸ್ತೆಯಲ್ಲಿ ಚಾಕು ತೆಗೆದುಕೊಂಡು ತೋಳನ್ನು ಕುಯ್ಯುತ್ತಿದ್ದರು. ಅದನ್ನು ನೋಡಿದ ಸಾವ ಜನಿಕರು ಬಿಡಿಸಲಿಕ್ಕೆ ಹೋದರೆ ಅವರಿಗೆ ಚಾಕುವಿನಿಂದ ತಿವಿದುದನ್ನು ಕಂಡು ಆನೇಕರಿಗೆ ಗಾಬರಿಯಾಗಿದೆ. ಇದರ ಬಗ್ಗೆ ಪೋಲೀಸರು ಏನು ಕ್ರಮ ತೆಗೆದುಕೊಂಡಿದ್ದಾರೆ? ಆ ಆರೋಪಿಗಳನ್ನು ಪತ್ತೆ ಹಚ್ಚಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ಪೋಲೀಸರ ನಿಷ್ಕ್ರಿಯತೆಯ ಬಗ್ಗೆ ನಾನು ಸರ್ಕಲ್ ಇನ್ಸ್‌ಪೆಕ್ಟರಿಗೆ ಫೋನ್ ಮಾಡಿದರೆ ಅವರು ಕಛೇರಿಯಲ್ಲಿ ಇದ್ದೂ ಇಲ್ಲ ಅನ್ನಿಸಿಕೊಂಡರು. ಪೋಲೀಸ್ ಇಲಾಖೆ ಇಷ್ಟರ ಮಟ್ಟಿಗೆ ನಿಷ್ಕ್ರಿಯತೆಯಿಂದ ಇದೆ. ಇದು ಬಹಳ ಗಹನವಾದ ವಿಚಾರ. ನಂಜನಗೂಡಿನ ಇತಿಹಾಸದಲ್ಲಿ ಎಂದೂ ಇಂಥ ಪರಿಸ್ಥಿತಿ ಉದ್ಭವಿಸಿರಲಿಲ್ಲ. ಆ ಹುಡುಗನಿಗೆ ಅನಾಹುತದ ಸಮಯದಲ್ಲಿ ಅಲ್ಲಿನ ಮುನಿಸಿಪಲ್ ಕೌನ್ಸಿಲರ್ ಸಹ